ರಾಮೂಗೆ ನೂರಾರು ಪ್ರಶ್ನೆಗಳ ಸುರಿಮಳೆಯಾಯಿತು. ಅಂದು ಅವನಿಗೆ ಚಾ ತಂದು ಕೊಟ್ಟ ಇರಾನಿ ಹೋಟಲಿನವ ದುಡ್ಡು ತೆಗೆದುಕೊಳ್ಳಲಿಲ್ಲ. ಚನಾವಾಲಾ ತನ್ನ ಮಗನ ಹೊಸ ಚಡ್ಡಿ –ಶರಟುಗಳನ್ನು ರಾಮೂಗೆ ಪ್ರೋಗ್ರಾಂ ದಿನ ಹಾಕಿಕೊಳ್ಳಲು ಕೊಡುವುದಾಗಿ ಬೆನ್ನು ತಟ್ಟಿ ಹೇಳಿದ. ಕೈ ನೋಡುವ ಬಾಬಾ ಮನಸಾರೆ ಆಶೀರ್ವದಿಸಿ. 'ನಂಗೆ ನಿನ್ನ ಮುಖ ಲಕ್ಷಣದಿಂದಲೇ ಗೊತ್ತಾಗಿತ್ತು. ಒಂದು ದಿನ ದೊಡ್ಡ ಮನುಷ್ಯ ಆಗ್ತೀ ಅಂತ. ಬರೀ ಪಾಲಿಶ್ ಹುಡುಗನ ಕೈ ಇದಲ್ಲ' ಎಂದು ಜಂಭದಿಂದ ಹೇಳಿದ.

ಯಾವುದಕ್ಕೂ ಹೆಚ್ಚು ಪ್ರತಿಕ್ರಿಯೆ ತೋರದ ಕಾಕಿ ಕೂಡ, ಈ ವಿಷಯ ತಿಳಿದಾಗ ಸಂತಸದಿಂದ ಹಿಗ್ಗಿ ಅಕ್ಕಪಕ್ಕದ ಹೆಂಗಸರಿಗೆಲ್ಲಾ ತಮ್ಮ ರಾಮು ಟಿ.ವಿ.ಲಿ ಬರುವ ವಿಷಯ ಹೇಳಿಕೊಂಡು ತಿರುಗಿದಳು.

ಇದ್ದಕ್ಕಿದ್ದ ಹಾಗೆ ಎಲ್ಲರ ದೃಷ್ಟಿಯಲ್ಲಿ ರಾಮು ಒಬ್ಬ ವ್ಯಕ್ತಿಯಾಗಿದ್ದ. ಆ ಒಂದು ಕ್ಷಣದಲ್ಲಿ ಅವನ ಅಂತಸ್ತು ಹಠಾತ್ತನೆ ಏರಿತ್ತು.

**'ಹೌದು- ನನಗೆ ತಂದೆ ತಾಯಿ ಇಬ್ಬರೂ ಇಲ್ಲ. ಹಾಂ, ಕಾಕಿ ಜೊತೆ ಇದ್ದೇನೆ. ಕಾಕಿ ಏನಾಗಬೇಕೋ ಗೊತ್ತಿಲ್ಲ... ಏನು? ಓದಬೇಕಂತ ಆಸೇನಾ? ಇದೆ. ಸ್ಕೂಲಿಗೆ ಹೋಗಲು ವೇಳೆ ಇಲ್ಲ. ಮರಾಠಿ ಅಕ್ಷರಗಳು ಬರುತ್ತೆ. ಆಂ, ಶೂ ಪಾಲಿಶ್ ವೃತ್ತಿ ಇಷ್ಟವೇ... ಏಕೆ ಎಂದರೆ ಮೊದಲಿಂದ ಅಭ್ಯಾಸವಾಗಿದೆ. ಸಿನಿಮಾ ಅಂದ್ರೆ... ಹಾಂ, ತುಂಬಾ ಇಷ್ಟ. ಊಹೂಂ ಕ್ರಿಕೆಟ್, ಫುಟ್‌ಬಾಲ್ ಯಾವ ಆಟಾನೂ ಆಡೋಕೆ ಬರೋಲ್ಲ. ಎಂದೂ ಆಡಿಲ್ಲ...**

ರಾಮೂ ದೂರದರ್ಶನ ಕೇಂದ್ರಕ್ಕೆ ರೆಕಾರ್ಡಿಂಗ್‌ಗೆ ಹೋಗಿ ಬಂದ ಮೇಲಂತೂ ಯಾವಾಗಲೂ ಅವನ ಸುತ್ತ ಜನಜಂಗುಳಿ. ಅವನ ಅನುಭವಗಳನ್ನು ಕೇಳಲು ಎಲ್ಲರ ಕುತೂಹಲ.

'ನಿನ್ನನ್ನು ಏನೇನು ಪ್ರಶ್ನೆ ಕೇಳಿದರು?'

'ಅಲ್ಲಿ ಯಾರು ಬೇಕಾದರೂ ಒಳಗೆ ಬರಬಹುದಾ?'

'ಅಮಿತಾಭ್ ಬಚ್ಚನ್ ನೋಡಲು ಸಿಕ್ಕಿದ್ದನಾ?'

'ತುಂಬಾ ದುಡ್ಡು ಕೊಡ್ತಾರಂತೆ, ಹೌದಾ?'

'ಸಮಾಚಾರ ಓದ್ತಾರಲ್ಲಾ– ಆ ಹುಡುಗೀರೆಲ್ಲಾ ಅಲ್ಲೇ ಓಡಾಡ್ತಿರ್‍ತಾರಂತೆ, ನಿಂಗೆ ಯಾರಾದರೂ ಸಿಕ್ಕಿದ್ರಾ?'

'ನಿನ್ನ ಕಾರ್ಯಕ್ರಮ ಯಾವಾಗ ಬರುತ್ತೆ?'

ತರಹ–ತರಹ ಪ್ರಶ್ನೆ. ರಾಮು ಉತ್ಸಾಹದಿಂದ ತನ್ನ ಅನುಭವವನ್ನೆಲ್ಲಾ ಎಲ್ಲರೊಂದಿಗೆ ಹಂಚಿಕೊಂಡ. ಅಂದಿನಿಂದ ಎಲ್ಲರಿಗೂ 'ಟಿ.ವಿ. ಹುಡುಗ'ನಾದ.

ರಾಮೂನ ಪ್ರೋಗ್ರಾಂ ಇದ್ದ ದಿನ ಅವನಿಗೆ ಗೊತ್ತಿದ್ದವರೆಲ್ಲಾ ಯಾವುದಾದರೊಂದು